5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲ್ಯೂ- 07
ಸಿಡಬ್ಲ್ಯೂ- 08

| | | |
|---|---|---|
| ಸಾಕ್ಷಿ ಹೆಸರು | - | ಗಣಪತಿ |
| ತಂದೆ ಹೆಸರು | - | ಸಣ್ಣಪ್ಪ |
| ವಯಸ್ಸು | - | 61 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸಾರೇಕೊಪ್ಪ, ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕಃ 14-07-2023

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಆರೋಪಿತರ ಪರಿಚಯ ಇದೆ. ಪ್ರಾ ಸಾ - 1 ಮತ್ತು ಚಾ ಸಾ -2 ನನ್ನ ಮಕ್ಕಳು. ಪ್ರಾ ಸಾ -5 ನನ್ನ ಸೊಸೆ. ಚಂದ್ರಪ್ಪ ಪ್ರಾ ಸಾ -5 ರವರ ತಂದೆ. ಚಾಸಾ-9 ನನ್ನ ಹೆಂಡತಿ. ಪ್ರಾ ಸಾ -2, ಪ್ರಾ ಸಾ -4, ಚಾಸಾ-10 ಮತ್ತು ಚಾಸಾ-11 ರವರ ಪರಿಚಯ ಇದೆ.

ಆರೋಪಿತರು ಮತ್ತು ಪ್ರಾ ಸಾ -1 ಮತ್ತು ಚಾಸಾ -2 ರವರ ನಡುವೆ ಗಲಾಟೆಯಾಗಿರುತ್ತದೆ. ಸದರಿ ಗಲಾಟೆಯು 4 ವರ್ಷಗಳ ಹಿಂದೆ ನಡೆದಿರುತ್ತದೆ. ಸದರಿ ಗಲಾಟೆಯ ದಿನ 1 ನೇ ಆರೋಪಿಯು ನಮ್ಮ ತೋಟಕ್ಕೆ ಬೆಂಕಿ ಹಚ್ಚಿರುತ್ತಾರೆ. ನಾನು ಮತ್ತು ನಮ್ಮ ಮಕ್ಕಳು ಕೇಳಲು ಹೋಗಿದ್ದಕ್ಕೆ ಅವರು ನಮ್ಮ ಮೇಲೆ ಗಲಾಟೆಗೆ ಬಂದಿರುತ್ತಾರೆ. ಸದರಿ ತೋಟವು 1 ಎಕರೆ ವಿಸ್ತೀರ್ಣ ಇದ್ದು ಸದರಿ ತೋಟದಲ್ಲಿ ಅಡಿಕೆ ಮತ್ತು ಬಾಳೆ ಹಾಕಿದ್ದವು , ಬೆಂಕಿ ಹಚ್ಚಿದ್ದರಿಂದ ಸದರಿ ಮರಗಳು ಸುಟ್ಟು ಹೋಗಿರುತ್ತವೆ. ಸದರಿ ಘಟನೆಯಲ್ಲಿ 50 ಗಿಡಗಳು ಸುಟ್ಟು ಹೋಗಿರುತ್ತವೆ. 50 ಮರಗಳು ಸುಟ್ಟು ಹೋಗಿದ್ದರಿಂದ ಅಂದಾಜು 3 ರಿಂದ 4 ಸಾವಿರ ರೂ. ಲುಕ್ಸಾನು ಆಗಿರುತ್ತದೆ. ಸದರಿ ತೋಟಕ್ಕೆ ಬೇಲಿ ಇರಲಿಲ್ಲ, ತಂತಿ ಬೇಲಿ ಹಾಕಲು

ತಂತಿಯನ್ನು ತಂದು ಜಮೀನಲ್ಲಿ ಒಂದು ಕಡೆ ಇಟ್ಟಿರುತ್ತೇವೆ. ಸದರಿ ಬೇಲಿಯನ್ನು ಹಾಕಲು ಕಾರಣ ರಾಜಪ್ಪ ರವರ ಮನೆಯ ದನಗಳು ತೋಟಕ್ಕೆ ಬರುತ್ತಿದ್ದು ಬೇಲಿ ಹಾಕಲು ತಂತಿಯನ್ನು ತರಿಸಿರುತ್ತೇವೆ. ದನಗಳು ಬಂದು ನಮ್ಮ ತೋಟವನ್ನು ಹಾಳು ಮಾಡುತ್ತಿದ್ದ ಬಗ್ಗೆ 1 ನೇ ಆರೋಪಿಗೆ ತಿಳಿಸಿರುತ್ತೇವೆ.

1 ನೇ ಆರೋಪಿ ನಮ್ಮ ತೋಟಕ್ಕೆ ಬೆಂಕಿ ಹಚ್ಚಿದ ದಿನ ಪ್ರಾ ಸಾ -1 ಮತ್ತು ಚಾ ಸಾ -2 ರವರು ಜೆ ಸಿ ಬಿ ತೆಗೆದುಕೊಡಯಿ ಬೇರೆ ಕಡೆಗೆ ಕೆಲಸಕ್ಕೆ ಹೋಗಿದ್ದರು. ಪ್ರಾ ಸಾ -1 ಮತ್ತು ಚಾ ಸಾ -2 ರವರು ಸಂಜೆ 6 -00 ಗಂಟೆಗೆ ಮನೆಗೆ ಬಂದಿರುತ್ತಾರೆ. ಪ್ರಾ ಸಾ -1 ಮತ್ತು ಚಾ ಸಾ -2 ರವರು ತೋಟಕ್ಕೆ ಬೆಂಕಿ ಹಾಕಿದ್ದನ್ನು ನೋಡಿ ತಿಳಿಸಿದುಕೊಂಡು 1 ನೇ ಆರೋಪಿಯ ಮನೆಗೆ ಕೇಳಲು ಸಂಜೆ 6-00 ರಿಂದ 6-30 ಗಂಟೆ ಸಮಯದಲ್ಲಿ ಹೋಗಿರುತ್ತಾರೆ.

ಪ್ರಾ ಸಾ -1 ಮತ್ತು ಚಾ ಸಾ -2 ರವರು 1 ನೇ ಆರೋಪಿಯನ್ನು ತೋಟಕ್ಕೆ ಬೆಂಕಿ ಹಾಕಿದ ಬಗ್ಗೆ ಕೇಳಿ ಬರುವ ಸಮಯದಲ್ಲಿ ಆರೋಪಿತರು ಗಲಾಟೆ ಮಾಡಿರುತ್ತಾರೆ. ಹುಣಸೆಕೊಪ್ಪದ ಮಂಜಪ್ಪನ ಮನೆಯ ಹತ್ತಿರ ಗಲಾಟೆ ಮಾಡಿರುತ್ತಾರೆ. ಗಲಾಟೆಯ ಶಬ್ದ ನಮ್ಮ ಮನೆಗೆ ಕೇಳಿಸಿರುತ್ತದೆ. ಗಲಾಟೆಯ ಶಬ್ದ ಕೇಳಿ ನಾನು, ಚಾಸಾ-9 ನನ್ನ ಹೆಂಡತಿ , ಪ್ರಾ ಸಾ -5 ನನ್ನ ಸೊಸೆ ಮತ್ತು ಪ್ರಾ ಸಾ -6 ಸ್ಥಳಕ್ಕೆ ಹೋಗಿರುತ್ತೇವೆ. ನಾವು ಹೋಗುವಷ್ಟರಲ್ಲಿ ಗಲಾಟೆ ಮುಗಿದಿತ್ತು . 3 ನೇ ಆರೋಪಿಯು ಕಲ್ಲಿನಿಂದ ಚಾಸಾ-2 ರವರ ತಲೆಗೆ ಹೊಡೆದಿರುತ್ತಾನೆ. ಆಗ ಚಾಸಾ-2 ಕೆಳಗೆ ಬಿದ್ದಿರುತ್ತಾನೆ. ಆಗ ಚಾಸಾ-2 ಕೆಳಗೆ ಬಿದ್ದಾಗ 7 ಮತ್ತು 8 ನೇ ಆರೋಪಿತರು ಚಾಸಾ-2 ರವರಿಗೆ ಒದೆಯುತ್ತಿದ್ದರು.

ಪ್ರಾ ಸಾ -1 ರವರಿಗೆ 4 ನೇ ಆರೋಪಿ ಕೈ ರಟ್ಟೆ ಹಿಡಿದುಕೊಂಡಿದ್ದು 5 ನೇ ಆರೋಪಿ ಪ್ರಾ ಸಾ -1 ರವರ ಕುತ್ತಿಗೆ ಹಿಡಿದುಕೊಂಡಿದ್ದು 6 ನೇ ೯ಆರೋಪಿ ದೊಣ್ಣೆಯಿಂದ ಪ್ರಾ ಸಾ -1 ರವರ ತಲೆಯ ಬಲಭಾಗಕ್ಕೆ ಹೊಡೆದನು. ಆಗ ಪ್ರಾ ಸಾ -1 ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿರುತ್ತಾನೆ. ನಂತರ

ಪ್ರಾ ಸಾ -2 ಮತ್ತು ಪ್ರಾ ಸಾ -4 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ಗಲಾಟೆ ಬಿಡಿಸಿದ ನಂತರ ಆರೋಪಿತರು ಅಲ್ಲಿಂದ ಹೊರಟು ಹೋಗಿರುತ್ತಾರೆ.

ನಂತರ ಪ್ರಾ ಸಾ -1 ಮತ್ತು ಚಾಸಾ-2 ರವರನ್ನು ಸೊರಬ ಆಸ್ಪತ್ರಗೆ ಕರೆದುಕೊಂಡು ಹೋಗಿದ್ದು ಸದರಿ ಆಸ್ಪತ್ರೆಯಲ್ಲಿ ವೈಧ್ಯರು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದರಿಂದ  ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ. ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಾಸಾ-2 ರವರು ಕೋಮಾದಲ್ಲಿ ಇದ್ದರು. ಚಾಸಾ-2 ರವರನ್ನು ಮ್ಯಾಕ್ಸ್ ಆಸ್ಪತ್ರೆಯಿಂದ ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.  ಈಗ ಚಾಸಾ-2 ರವರು ಮಾತನಾಡುವ ಸ್ಥಿತಿಯಲ್ಲಿ ಇಲ್ಲ.

ಆರೋಪಿತರ ವಿರುದ್ಧ ದೂರನ್ನು ಪ್ರಾ ಸಾ -1 ರವರು ನೀಡಿರುತ್ತಾರೆ. 3 ನೇ ಆರೋಪಿ ಚಾಸಾ-2 ರವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ - 2 ಎಂದು ಗುರುತಿಸಲಾಗಿದೆ. ಪ್ರಾ ಸಾ -1 ರವರಿಗೆ ಹೊಡೆಯಲು ಉಪಯೋಗಿಸಿದ ರೀಪರ್ ನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದ ಮುಂದಿರುವ ರೀಪರ್ ನ್ನು  ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ - 3 ಎಂದು ಗುರುತಿಸಲಾಗಿದೆ. ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಗಲಾಟೆಯಾದ ಸಮಯದಲ್ಲಿ ನಾವೆಲ್ಲರೂ ಸ್ಥಳಕ್ಕೆ ಹೋದಾಗ ಆರೋಪಿತರು ಕೈಯ್ಯಲ್ಲಿ ದೊಣ್ಣೆ ಮತ್ತು ಕಲ್ಲನ್ನು ಹಿಡಿದುಕೊಂಡು ಪ್ರಾ ಸಾ -1 ಮತ್ತು ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ  ಅಡ್ಡಗಟ್ಟಿ ಏನ್ರೋ ಸೂಳೇ ಮಕ್ಕಳಾ ನಮ್ಮ ಮನೆತನದವರನ್ನು

ಎದುರು ಹಾಕಿಕೊಂಡು ನಮ್ಮ ಊರಿನಲ್ಲಿ ಹೇಗೆ ಜೀವನ ಮಾಡುತ್ತೀರಾ ನೋಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು ಎಂದರೆ ಹೌದು. ಪ್ರಾ ಸಾ -1 ರವರ ಹಣೆಗೆ 7 ನೇ ಆರೋಪಿ ಕಲ್ಲಿನಿಂದ ಹೊಡೆದು ರಕ್ತಗಾಯಪಡಿಸಿದ್ದ ಎಂದರೆ ಹೌದು. ಸಾಕ್ಷಿಯು ಸದರಿ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ -1 ಎಂದು ಗುರುತಿಸಲಾಗಿದೆ. ಆರೋಪಿಗಳು ಪ್ರಾ ಸಾ -1 ಮತ್ತು ಚಾಸಾ-2 ರವರಿಗೆ ಈ ದಿನ ಉಳಿದುಕೊಂಡಿದ್ದೀರಿ ಇನ್ನು ಮುಂದೆ ನಮ್ಮ ತಂಟೆಗೆ ಬಂದರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಹೌದು. ಈ ವಿಷಯಗಳನ್ನು ಪೋಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಹೌದು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಪೋಲೀಸರ ಮುಂದೆ ನೀಡಿದ ಹೇಳಿಕೆಯನ್ನು ಮೊದಲ ಬಾರಿಗೆ ಅವರ ಮುಂದೆ ಹೇಳಿರುತ್ತೇನೆ , ಅದಕ್ಕಿಂತ ಮುಂಚೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಹೌದು. ಪೋಲೀಸರು ದಿನಾಂಕಃ 04-04-2020 ರಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಎಂದರೆ ಹೌದು. ತೋಟವು ನಮ್ಮ ಮನೆಯ ಹಿತ್ತಲಲ್ಲಿ ಇರುತ್ತದೆ. ನಮ್ಮ ಮನೆಯ ಮುಂದೆ ತವನಂದಿ ರಸ್ತೆ, ಮನೆಯ ಹಿಂದುಗಡೆ ಕಾನಕೇರಿ ರಸ್ತೆ ಬರುತ್ತದೆ ಎಂದರೆ ಹೌದು. ನಮ್ಮ ತೋಟದ ಪಕ್ಕದಲ್ಲಿ 1 ನೇ ಆರೋಪಿಯ ಮನೆ ಇದೆ ಎಂದರೆ ಹೌದು. ನಮ್ಮ ತೋಟದಿಂದ ರಾಜಪ್ಪನ ಮನೆಗೆ ಒಂದು ಬೇಲಿ ಮಾತ್ರ ಇದ್ದು ಬೇಲಿ ದಾಟಿದ ಕೂಡಲೆ 1 ನೇ ಆರೊಪಿ ಮನೆ ಇರುತ್ತದೆ ಎಂದರೆ ಹೌದು.

ಪ್ರಾ ಸಾ -1 ಮತ್ತು ಚಾಸಾ-2 ಘಟನೆ ದಿನ ಸಂಜೆ 6 ಗಂಟೆಗೆ ಮನೆಗೆ ಬಂದಾಗ ತೋಟಕ್ಕೆ ಹೋಗಿ ನೋಡಿದಾಗ ಬೆಂಕಿ ಬಿದ್ದಿತ್ತು. ಅದನ್ನು ಕೇಳಲು ಪ್ರಾ ಸಾ -1 ಮತ್ತು ಚಾಸಾ-2 ಹೋದಾಗ 1 ನೇ ಆರೋಪಿ ಮನೆಯ ಹತ್ತಿರ ಗಲಾಟೆ ಆಗಿರುತ್ತದೆ. ಗಲಾಟೆ ಸಮಯದಲ್ಲಿ ನಾನು ಮನೆಯಲ್ಲಿ ಇರಲಿಲ್ಲ ಗದ್ದೆಗೆ ಹೋಗಿದ್ದೆನು. ಪ್ರಾ ಸಾ -1 ಮತ್ತು ಚಾಸಾ-2 ರವರ ಹತ್ತಿರ ಜೆ ಸಿ ಬಿ ಇರುತ್ತದೆ. ಸದರಿ ಜೆ ಸಿ ಬಿ ಗೆ ಮುಂದುಗಡೆ ಕಬ್ಬಿಣದ ಬಕೆಟ್ ಇದೆ ಎಂದರೆ ಹೌದು.

ಮೊದಲಿದ್ದ ಬೇಲಿಯನ್ನು ಕೈಯಿಂದ ತೆಗೆದು ಬದಿಗಿಟ್ಟು ತಂತಿ ಬೇಲಿ ಹಾಕಬೇಕೆಂದು ಸದರಿ ಬೇಲಿಯನ್ನು ತೆಗೆದಿರುತ್ತೇವೆ. ಈ ರೀತಿ ಗಲಾಟೆಯಾಗುವ 2-3 ದಿನಗಳ ಮೊದಲು ಸದರಿ ಬೇಲಿಯನ್ನು ತೆಗೆದು ಬದಿಗಿಟ್ಟಿರುತ್ತೇವೆ.

ಚಾಸಾ -6 ರಿಂದ ಚಾಸಾ 9 ರವರು ಒಟ್ಟಿಗೆ ಆ ದಿನ ಗಲಾಟೆ ಸಮಯದಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಹೋಗಿ ನೋಡಿದಾಗ ಪ್ರಾ ಸಾ -1 ಮತ್ತು ಚಾಸಾ-2 ರವರು ಕೆಳಗೆ ಬಿದ್ದಿರುತ್ತಾರೆ. ನಾವು ಹೋಗಿ ಅವರನ್ನು ನೋಡಿದಾಗ ಅವರಿಗೆ ಪ್ರಜ್ಞೆ ಇರಲಿಲ್ಲ. ನಾವು ಯಾರು ಹೊಡೆದಿದ್ದು ಎಂದು ಯಾರನ್ನು ಕೇಳಿರುವುದಿಲ್ಲ. ನಮ್ಮ ಮನೆಯಿಂದ ಗಲಾಟೆ ಸ್ಥಳಕ್ಕೆ 200-250 ಮೀಟರ್ ದೂರ ಇದ್ದು ನಾವು ಗಲಾಟೆಯನ್ನು ನೋಡಿರುತ್ತೇವೆ. 3 ನೇ ಆರೋಪಿ ತನ್ನ ಬಲಗೈಯಿಂದ ಚಾಸಾ-2 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾನೆ. ಆ ರೀತಿ ಹೊಡೆಯುವಾಗ ಚಾಸಾ-2 ನಿಂತುಕೊಂಡಿದ್ದನು.

ಗಲಾಟೆಯ ಸಮಯದಲ್ಲಿ 50 ಜನ ಸೇರಿದ್ದು ಅವರು ಸುತ್ತುವರೆದಿದ್ದರು. ನಾವು ನಾಲ್ಕು ಜನ ಹೋಗಿ ಬಿದ್ದಂತಹ ಪ್ರಾ ಸಾ -1 ಮತ್ತು ಚಾಸಾ-2 ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆ ಸಮಯದಲ್ಲಿ ಆರೋಪಿತರು ಈ ದಿನ ಬಿಟ್ಟಿರುತ್ತೇವೆ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಬಿಡುವುದಿಲ್ಲ ಎಂದು ಹೇಳಿ ಹೋಗಿರುತ್ತಾರೆ.

6 ನೇ ಆರೋಪಿಯ ಮನೆ ಶನಿದೇವರ ದೇವಸ್ಥಾನದ ಹತ್ತಿರ ಇದೆ ಎಂದರೆ ಹೌದು. ಶನಿ ದೇವರ ದೇವಸ್ಥಾನಕ್ಕೂ ನಮ್ಮ ಮನೆಗೂ 2 ಕಿ ಮೀ ದೂರ ಆಗುತ್ತದೆ ಎಂದರೆ ಸರಿಯಲ್ಲ, ಅರ್ಧ ಕಿ ಮೀ ದೂರ ಆಗುತ್ತದೆ. ತವನಂದಿ ರಸ್ತೆಯಿಂದ ಅರ್ಧ ಕಿ ಮೀ ಕೆಳಗೆ ಹೋಗುತ್ತದೆ ಎಂದರೆ ಹೌದು. ತವನಂದಿ ರಸ್ತೆಯಲ್ಲಿ ಇರುವ ಸರ್ಕಲ್ ನಿಂದ ಅರ್ಧ ಕಿ.ಮೀ ಕೆಳಗೆ ಶನೇಶ್ವರ ದೇವಸ್ಥಾನಕ್ಕೆ ಹೋಗಬೇಕು ಎಂದರೆ ಹೌದು.

ಆರೋಪಿತರೆಲ್ಲರೂ ಮಳ್ಳಿ ಮನೆತನದವರು ಮತ್ತು ದಾಯಾದಿಗಳು ಎಂದರೆ ಹೌದು. ನಮ್ಮ ಮನೆತನ ಬೆನ್ನೂರು ಮನೆತನ ಎಂದರೆ ಹೌದು. ಸಾರೇಕೊಪ್ಪದಲ್ಲಿ ನಮ್ಮ ಮನೆತನದವರು 25 ದಾಯಾದಿಗಳ ಮನೆಗಳು ಇವೆ ಎಂದರೆ ಹೌದು. ಅವರೆಲ್ಲರೂ ಬೇರೆ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಹೌದು. ಸಾರೇಕೊಪ್ಪದಲ್ಲಿ ಮಳ್ಳಿ ಮನೆತನದವರದ್ದು 9 ಮನೆಗಳು,ನಮ್ಮ ಮನೆತನದವರದ್ದು 25 ಮನೆಗಳು ಇವೆ ಎಂದರೆ ಹೌದು.

ಪ್ರಾ ಸಾ- 6 ರವರು ತಾವರೆಹಳ್ಳಿ ಗ್ರಾಮದವರು ಎಂದರೆ ಹೌದು. ತಾವರೆಹಳ್ಳಿಗೂ ಸಾರೇಕೊಪ್ಪಕ್ಕೂ 15 ಕಿ ಮೀ ದೂರ ಆಗುತ್ತದೆ ಎಂದರೆ ಸರಿಯಲ್ಲ, 8 ಕಿ ಮೀ ಆಗುತ್ತದೆ ಎಂದು ನುಡಿಯುತ್ತಾರೆ.

ನಮ್ಮ ತೋಟಕ್ಕೆ ಬೆಂಕಿ ಬಿದ್ದ ತೋಟದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ತೋಟದಲ್ಲಿ ಗಿಡಗಳು ಸುಟ್ಟು ಹೋದ ಬಗ್ಗೆ ಪೋಲಿಸರು ಬಂದು ಮಹಜರ್ ಮಾಡಿರುತ್ತಾರೆ. ಸದರಿ ಮಹಜರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಕಂಪ್ಯೂಟರ್ ನಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.1 ನೇ ಆರೋಪಿಯ ದನದ ಕೊಟ್ಟಿಗೆಯನ್ನು ಜೆ ಸಿ ಬಿ ಯಿಂದ ಪ್ರಾ ಸಾ -1 ಮತ್ತು ಚಾಸಾ-2 ರವರು ಬೀಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಜೆ ಸಿ ಬಿ ಟಿ ಜಿ ಕೊಪ್ಪದಲ್ಲಿ ಇತ್ತು ಎಂದು ನುಡಿಯುತ್ತಾರೆ.

ಪ್ರಾ ಸಾ -1 ಮತ್ತು ಚಾಸಾ-2 ರವರು 1 ನೇ ಆರೋಪಿಯ ಮನೆಗೆ ಹೋಗಿ 1 ನೇ ಆರೋಪಿ ಮತ್ತು ಆತನ ಹೆಂಡತಿಗೆ ಹೊಡೆದಿದ್ದರಿಂದ ಅವರು ಸೊರಬ ಆಸ್ಪತ್ರೆಗೆ ಸೇರಿದ್ದು ಮಾರನೇ ದಿನ ಸಾಗರದ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮನೆಯ ಹತ್ತಿರ ಗಲಾಟೆಯಾದ ದಿನ ನಾನು ಇದ್ದೆನು ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ಮಗ ರಾಮಚಂದ್ರ ಇದ್ದನೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಕೊಟ್ಟಿಗೆಯನ್ನು ಪ್ರಾ ಸಾ -1 ರವರು ಜೆ ಸಿ ಬಿ ಯಿಂದ ಬೀಳಿಸುತ್ತಿರುವಾಗ ಜೆ ಸಿ ಬಿ ಯ ಬಕೆಟ್ ತಾಗಿ ಚಾಸಾ-2 ರವರಿಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ.

ಮಂಜಪ್ಪನ ಮನೆಯ ಬಳಿ ಗಲಾಟೆಯಾಗುತ್ತಿರುವಾಗ ಪ್ರವೀಣನು ಪ್ರಾ ಸಾ -1 ಮತ್ತು ಚಾಸಾ-2 ರವರನ್ನು ಕೈ ಹಿಡಿದು ಕರೆದುಕೊಂಡು ಮನೆಗೆ ಕರೆದುಕೊಂಡು ಬಿಟ್ಟಿರುತ್ತಾನೆ ಎಂದರೆ ಸರಿಯಲ್ಲ, ಆದರೆ ಗಲಾಟೆ ಬಿಡಿಸಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಅದಾದ ನಂತರ 1ನೇ ಆರೋಪಿ ಮನೆಗೆ ಹೋಗಿ ಪ್ರಾ ಸಾ -1 ಮತ್ತು ಚಾಸಾ-2 ರವರು ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಮನೆ ನಮ್ಮ ಮನೆಯಿಂದ 25 ಅಡಿ ದೂರ ಎಂದರೆ ಹೌದು. ಪ್ರಾ ಸಾ -1 ಮತ್ತು ಚಾಸಾ-2 ರವರು 1ನೇ ಆರೋಪಿಯನ್ನು ತೋಟಕ್ಕೆ ಬೆಂಕಿ ಹಾಕಿದ ಬಗ್ಗೆ ಕೇಳಿರುತ್ತಾರೆ. ಪ್ರಾ ಸಾ -1 ಮತ್ತು ಚಾಸಾ-2 ರವರು 1ನೇ ಆರೋಪಿಯನ್ನು ಕೇಳಲು ತವನಂದಿ ರಸ್ತೆಯಿಂದ ಕೇಳಲಿಲ್ಲ , ಮನೆಯ ಹಿತ್ತಲಿನಿಂದ ಕೇಳಿರುತ್ತಾರೆ. ನಾನು ಸ್ಥಳಕ್ಕೆ ಹೋಗಿ ಮೊದಲ ಬಾರಿ ನೋಡಿದಾಗ ಪ್ರಾ ಸಾ -1 ಮತ್ತು ಚಾಸಾ-2 ರವರು ಪ್ರಜ್ಞೆ ತಪ್ಪಿ ಬಿದ್ದಿದ್ದರು.

ನಾನು ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).